ಮಂಡಿ ಕುಮಾರ್, ಬೆಂಗಳೂರು
ಮಧುಚಂದ್ರಕ್ಕೆ ಹೊರಟ ಮೊದಲ ದಂಪತಿ ಯಾರು?



ಶಿರದಲ್ಲಿ ಚಂದ್ರನನ್ನು, ವಧುವಲ್ಲಿ ಮಧುವನ್ನು ಕಂಡ ಶಿವನೇ, ಪಾರ್ವತಿಯೊಂದಿಗೆ.

ಬಿ. ಬಸವರಾಜ್, ಹರಿಹರ
ಹಳದಿ ಲೋಹಕ್ಕೂ, ಹಳದಿ ಕಣ್ಣಿಗೂ ಏನು ವ್ಯತ್ಯಾಸ?
ಅದರಿಂದ ಸರಮಾಲೆ; ಇದು ಕಾಮಾಲೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ದುರ್ಗುಣಗಳನ್ನು ಮೈಗೂಡಿಸಿಕೊಂಡವರನ್ನೇ ಹೆಚ್ಚಾಗಿ ಪ್ರೀತಿಸಿ ಗೌರವಿಸುತ್ತಾರಲ್ಲ?
ಕುರುಪಡೆಗೇ ಹೆಚ್ಚು ಅಕ್ಷೋಹಿಣಿ ಬೆಂಬಲ; ದುರ್ಗುಣ ಬೆಂಬಲ ನಮ್ಮ ಸಂಪ್ರದಾಯ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಬೀದಿನಾಯಿಗಳು ಕಾಂಪೌಂಡ್ ಹಾರುವಷ್ಟು ಸುಲಭವಾಗಿ ಸಾಕಿದ ನಾಯಿಗಳು ಹಾರಲಾಗದಲ್ಲ?



ಸಹಜವೇ. ತೃಪ್ತಿ ಇರುವಲ್ಲಿ ಸಾಧನೆ ಕಡಿಮೆ; ಹಸಿವು ಇರುವಲ್ಲಿ ಸಾಧನೆ ಅಪಾರ.

ಮಹೇಶ್ ಸಾಸನಬಾಳ, ಮಸ್ಕಿ
ಸಿನಿಮಾದಲ್ಲಿ ಈರುಳ್ಳಿ, ಬೆಳ್ಳುಳ್ಳಿ ಮಾರುವ ಅಂಗಡಿಯಲ್ಲಿ ಪಿಸ್ತೂಲು, ಬಂದೂಕು ಸಿಗುತ್ತಲ್ಲಾ, ಹೇಗೆ?
ಉರುಳುರುಳುವ ತರಕಾರಿಗಳ ಮಧ್ಯೆ ಉರುಳುರುಳಿಸುವ ತಕರಾರಿಗಳಿಗೆ ಬೇಕಾದ್ದನ್ನಡಗಿಸುವುದು ಸುಲಭವಂತೆ.

ಬಿ.ಟಿ. ನಾರಾಯಣಭಟ್ಟ, ನೇರಳಕಟ್ಟೆ
ಚಕ್ಕುಲಿಗೂ, ಚಪ್ಪಲಿಗೂ ಇರುವ ವ್ಯತ್ಯಾಸವೇನು?
ಸವಿಯಲು ಇದು, ಸವೆಸಲು ಅದು.

ಚಂದ್ರಕುಮಾರ್ ಡಿ., ಬೆಂಗಳೂರು
ಹೆಂಡತಿಯು ಜಗಳವಾಡದಂತೆ ಸದಾ ಶಾಂತವಾಗಿಡಲು ಸೂತ್ರಗಳಿವೆಯೆ?
'ಅನ್ಯಥಾ ಶರಣಂ ನಾಸ್ತಿ' ಎಂಬ ಏಕೈಕ ಸೂತ್ರ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ನೀರಿಗಿಳಿದ ಎಮ್ಮೆಗೂ, ತವರಿಗೆ ಹೋದ ಹೆಂಡತಿಗೂ ವ್ಯತ್ಯಾಸವೇನು?
ಎಮ್ಮೆಗೆ ಜಳಕ, ಸತಿಗೆ ಪುಳಕ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಗುರುಗಳಿಗೆ ವಂದಿಸಲು ಗುರುಪೂರ್ಣಿಮೆ; ಪತಿಗೆ ವಂದಿಸಲು ಭೀಮನಮಾವಾಸ್ಯೆ. ಸತಿಗೆ ವಂದಿಸಲು ಯಾವ ದಿವಸ?
ಸತಿಗೆ ಇಷ್ಟವಾಗದ ಕೆಲಸವನ್ನು ಪತಿಯು ಮಾಡಿದ ಯಾವ ದಿವಸವೂ ಆಗಬಹುದು.

ಬಿದರಹಳ್ಳಿ ವಿಜಯ, ಹಿರೇಹಡಗಲಿ
ಎಲ್ಲಾ ಪದಾರ್ಥಗಳಿಗೂ ಹುಳು ಬೀಳುತ್ತದೆ. ಆದರೆ ಉಪ್ಪಿಗೆ ಹುಳು ಬೀಳುವುದಿಲ್ಲ. ಏಕೆ?
ಹುಳುಗಳಿಗೂ ಮುಂದಿನ ಜನ್ಮಕ್ಕೆ ಉಪ್ಪಿನ ಋಣ ಉಳಿಸಿಕೊಳ್ಳಲು ಇಷ್ಟವಿಲ್ಲವಂತೆ.

ದಿನೇಶ್, ಗುಡ್ಡದೂರು
ನಾವು ಸೇವಿಸುವ ಗಾಳಿಗಿಂತ ರಾಜಕಾರಣಿಗಳ ಭಾಷಣವೇ ಅಗ್ಗವಂತೆ?
ಛೆ! ಅದು ಅಗ್ಗ ಅಲ್ಲ, ಜನಹಿತಕ್ಕೆ ಉರುಳಾಗುವ ಹಗ್ಗ.

ಕಾಳಿಹುಂಡಿ ಶಿವಕುಮಾರ್, ಮೈಸೂರು
ಮೊಬೈಲ್ ಇಲ್ಲದೆ ನೀವು ಎಷ್ಟು ದಿನಗಳವರೆಗೆ ಕಾಲ ಕಳೆಯುತ್ತೀರಿ?
ಹೊಸ ಮೊಬೈಲ್ ಕೊಳ್ಳಲು ಕಾಸು ಸಿಕ್ಕುವ ವರೆಗೆ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಜೀವನದಲ್ಲಿ ಕೆಲವು ಪ್ರಶ್ನೆಗಳು ಸುಲಭವಾಗಿರುತ್ತವೆ. ಆದರೆ ಉತ್ತರಗಳು ಕಠಿಣವಾಗಿರುತ್ತವೆ. ಅಲ್ವಾ?
ಬದುಕಿನ ಸಿಲಬಸ್ ತಿಳಿದರೆ ಉತ್ತರವೂ ಸುಲಭವೇ.

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು
ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವುದಕ್ಕೂ, ಲೆಕ್ಕಕ್ಕುಂಟು ಆಟಕ್ಕಿಲ್ಲ ಎನ್ನುವುದಕ್ಕೂ ವ್ಯತ್ಯಾಸ?
ಆಟಕ್ಕುಂಟು ಲೆಕ್ಕಕ್ಕಿಲ್ಲ ಭ್ರಷ್ಟಾಚಾರ; ಲೆಕ್ಕಕ್ಕುಂಟು ಆಟಕ್ಕಿಲ್ಲ ಮತದಾರ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ದ್ವಾರಕೆಯಲ್ಲಿ ಪೂತನಿಯ ದರ್ಶನವಾಯಿತು?
ಸದ್ಯ! ಹಿಂತಿರುಗಿದಿರಲ್ಲ! ಹಾಲು ಕೇಳಿದ್ದಿದ್ದರೆ ಕೂಡಲೆ ಇತಿಶ್ರೀ ಆಗಿರುತ್ತಿತ್ತು!

ರಮೇಶ್ ಜಿ. ಬೊಂಗಾಳೆ, ಬೈಲಹೊಂಗಲ
ಮನಸ್ಸಿಗೂ ಬುದ್ಧಿಗೂ ವ್ಯತ್ಯಾಸ?
ಮನಸ್ಸು ತರ್ಕಕ್ಕೆ ದೂರ; ಬುದ್ಧಿ ಭಾವನೆಗೆ ದೂರ.

ಅ. ಮೃತ್ಯುಂಜಯ, ಪಾಂಡವಪುರ
ಪೂರ್ವ ಜನ್ಮದ ಫಲ ಎಂದರೇನು?



ಪೂರ್ವದಲ್ಲಿ ಉದಯಿಸುವ ಸೂರ್ಯನ ಎಳೆಬಿಸಿಲಿನ ಹದವಾದ ಹಿತ ಎಂದು.

ಎಸ್. ವಿಜಯಕುಮಾರಿ, ಬೆಂಗಳೂರು
ಓದು ಒಕ್ಕಾಲು, ಬುದ್ಧಿ ಮುಕ್ಕಾಲು ಎಂದೇಕೆ ಹೇಳುತ್ತಾರೆ?
ಇಪ್ಪತ್ತು ವರ್ಷ ಓದಿ ಇನ್ನು ಅರವತ್ತು ವರ್ಷ ಬುದ್ಧಿ ಬಳಸಿ ಜೀವಿಸುವುದರಿಂದ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಜೀವನವೆಂಬ ಹಾವು–ಏಣಿ ಆಟದಲ್ಲಿ ಬದುಕುವ ಬಗೆ ಹೇಗೆ?
ನಮಗೆ ಬೇಕಾದ ಗರ ಹಾಕಿಕೊಳ್ಳುವುದನ್ನು ಕಲಿಯುವ ಮೂಲಕ.

ಸಿಹಿಮೊಗೆ ರಮೇಶ್, ಮೈಸೂರು
ರಾಜಕಾರಣದಲ್ಲಿ ಇರುವಷ್ಟು ಹಣ ಸಂಪಾದನೆ ಇನ್ನಾವ ಹುದ್ದೆಯಲ್ಲಿದೆ ಸಾರ್?
ರಾಜಕಾರಣ ಹುದ್ದೆಯಲ್ಲ; ಲೂಟಿ ಸಂಪಾದನೆಯಲ್ಲ.

■ ರಾಮ್